

ಕಾಡಿನಲ್ಲಿ ಕಂಡ ಚಂದನ ಚಿರತೆ.
ಚಿತ್ರ: ಡಿಯಾನ್ ಡಿ ವಿಲಿಯರ್ಸ್



ಕಪ್ಪು ಚಿರತೆಯ ಮೇಲಿನ ಪಕಳೆಗಳು ಬೆಳಕು ಓರೆಯಾಗಿ ಬಿದ್ದಾಗ ಮಾತ್ರ ಕಾಣುತ್ತವೆ.
ಚಿತ್ರ: ಹೊಳೆಮತ್ತಿ ನೇಚರ್ ಫೌಂಡೇಶನ್



ಚಿತ್ರ: ಗಿರಿ ಕಾವಲೆ

ಚೆಲುವೆಯರಲ್ಲಿ ಚೆಲುವೆಯಾಗಿದ್ದ ಇವಳು ಸುಮಾರು 6–7 ವರ್ಷದ ಸುಂದರ ಚಿರತೆ.

ಸಾಮಾನ್ಯವಾಗಿ ಚಿರತೆಗಳು (**Panthera pardus**) ತಿಳಿ ಹಳದಿ ಬಣ್ಣದ ತುಪ್ಪಳದ ಮೇಲೆ ಕಪ್ಪು ಬಣ್ಣದ ಪಕಳೆಗಳನ್ನು ಹೊಂದಿರುತ್ತವೆ, ಮತ್ತು ಅವುಗಳ ಮೂಗಿನ ತುದಿ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಆದರೆ, ಅತ್ಯಂತ ವಿರಳ ಬಣ್ಣದ ಈ ರೂಪಾಂತರವು ತಿಳಿ ಗಂಧದ ಬಣ್ಣವನ್ನು ಹೋಲುವ ತುಪ್ಪಳ ಹಾಗೂ ಅದರ ಮೇಲಿನ ಚುಕ್ಕೆಗಳು ಮಂಕಾದ ಕಂದು ಬಣ್ಣದಿಂದ ಕೂಡಿರುತ್ತವೆ. ತಕ್ಷಣ ಹೊಳೆಯಿತು ಇದು ಅತ್ಯಂತ ಅಪರೂಪ, ವಿಶೇಷ ಬಣ್ಣ ರೂಪದ ಚಿರತೆಯೆಂದು.

2012ರಲ್ಲಿ ದಕ್ಷಿಣ ಆಫ್ರಿಕಾದ ಮಡಿಕ್ವೆ ಗೇಮ್ ರಿಸರ್ವ್‌ನಲ್ಲಿ ಮೊದಲು ದಾಖಲಾಗಿದ್ದ ಈ ವಿಶೇಷ ಬಣ್ಣದ ತುಪ್ಪಳ ಹೊಂದಿರುವ ಚಿರತೆಯ ಬಗ್ಗೆ ನ್ಯಾಷನಲ್ ಜಿಯೊಗ್ರಾಫಿಕ್ ಸೊಸೈಟಿಯ ನಿಯತಕಾಲಿಕೆಯಲ್ಲಿ ವರದಿಯಾಗಿತ್ತು. ಈ ಬಣ್ಣದ ತುಪ್ಪಳ ಹೊಂದಿರುವ ಚಿರತೆಗಳಿಗೆ ‘ಸ್ಟ್ರಾಬೆರಿ ಚಿರತೆ’ (**strawberry leopard**) ಎಂದು ಹೆಸರು ನೀಡಲಾಗಿತ್ತು. ಇದಾದ ನಂತರ 2021ರಲ್ಲಿ ರಾಜಸ್ಥಾನದ ರಣಕಪುರದಲ್ಲಿ ಈ ತರಹದ ಬಣ್ಣ ಹೊಂದಿದ್ದ ಚಿರತೆಯೊಂದು ಕಂಡು ಬಂದು ಇದು ಏಷ್ಯಾ ಖಂಡದಲ್ಲೇ ಮೊದಲ ದಾಖಲೆ ಎಂದು ಹೇಳಲಾಯಿತು. ಹಾಗಾಗಿ ವಿಜಯನಗರ ಜಿಲ್ಲೆಯಲ್ಲಿ ಈಗ ದಾಖಲಾದ ಈ ಬಣ್ಣದ ಚಿರತೆ ಏಷ್ಯಾ ಖಂಡಕ್ಕೆ ಎರಡನೆಯ ದಾಖಲೆಯಾದರೆ, ನಮ್ಮ ರಾಜ್ಯಕ್ಕೆ ಮೊಟ್ಟ ಮೊದಲ ದಾಖಲೆಯಾಯಿತು.